# ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ________,__________ ತಾಲ್ಲೂಕು

ಸಂಕಲನಾತ್ಮಕ ಮೌಲ್ಯಮಾಪನ–1 ಸೆಪ್ಟಂಬರ್–2023 ಅಂಕಗಳು :– 30

ತರಗತಿ : 5ನೇ ವಿಷಯ : ಕನ್ನಡ ಅವಧಿ :– 90 ನಿ

**I. ಒಂದು ಪದ/ವಾಕ್ಯದಲ್ಲಿ ಉತ್ತರಿಸಿ :–** **3×1=3**

1) ಯಾರಿಗೆ ಮಾಲಿನ್ಯದ ಸೋಂಕು ತಗುಲಿತ್ತು?

2) ಗುಂಡನೆಯ ಕಲ್ಲು ಎಲ್ಲಿತ್ತು?

3) ನೇಸರ ಏನನ್ನು ಬಿತ್ತಬೇಕು?

**II. ಸರಿಯಾದ ಪದಗಳಿಂದ ಬಿಟ್ಟ ಸ್ಥಳ ತುಂಬಿರಿ:–** **3×1=3**

4) "ನೀವೂ ತಿನ್ನಿ,ನಮಗೂ ತಿನ್ನಲು ಬಿಡಿ"ಎಂದು ಹೇಳಿದವರು __________

5) ನದಿ ಮಧ್ಯದಿಂದ __________ಧುತ್ತನೆ ಪ್ರತ್ಯಕ್ಷಳಾದಳು.

6) 'ಸ್ವಾತಂತ್ರ್ಯದ ಹಣತೆ' ಪದ್ಯವನ್ನು ಬರೆದ ಕವಿ__________

**III. ಆವರಣದಲ್ಲಿ ಕೊಟ್ಟಿರುವ ಸೂಚನೆಯಂತೆ ಉತ್ತರಿಸಿ.** **4×1=4**

7) <u>ರಮೇಶನು</u> ಹಣ್ಣನ್ನು ತಿಂದನು.(ಗೆರೆ ಎಳೆದಿರುವ ನಾಮಪದ ಗುರುತಿಸಿ ಬರೆ)

8) ನಾಯಕ (ವಚನ ಬದಲಿಸಿ ಬರೆ)

9) ಶರಣ (ಲಿಂಗ ಬದಲಿಸಿ ಬರೆ)

10) ಮರವನ್ನು (ಬಿಡಿಸಿ ಬರೆ)

**IV. ಪದ್ಯವನ್ನು ಪೂರ್ತಿ ಮಾಡಿ :–** **1×2=2**

11) ಬೊಡ್ಡೆ ಕರಿದು__________

______________________

______________________

__________________ಗಿಡ ಮರ

**V. ಕೊಟ್ಟಿರುವ ಪ್ರಶ್ನೆಗಳಿಗೆ 2–3 ವಾಕ್ಯಗಳಲ್ಲಿ ಉತ್ತರಿಸಿ :–** **6×2=12**

12) ಜಂಬದಿಂದ ಬೇವಿನ ಮರ ಅಮ್ಮನ ಕಲ್ಲಿಗೆ ಏನೆಂದು ಹೇಳಿತು?

13) ಮಾರ್ಲಿನನ ಕಂಠ ಬಿಗಿದು ಬರಲು ಕಾರಣವೇನು?

14) ಬೆಳೆದು ನಿಂತ ಗಿಡ ಮರ ಹೇಗಿವೆ?

15) ಮಕ್ಕಳು ನದಿಯಲ್ಲಿ ಏಕೆ ಸ್ನಾನ ಮಾಡಿದರು?

16) ಲೋಕದಲ್ಲಿ ಸ್ತುತಿನಿಂದೆಗಳು ಬಂದರೆ ಹೇಗಿರಬೇಕು?

17) ಮೊಳಕೆ ಉಂಟಾದುದು ಹೇಗೆ?

**VI. ಕೊಟ್ಟಿರುವ ಪ್ರಶ್ನೆಗಳಿಗೆ 3–4 ವಾಕ್ಯಗಳಲ್ಲಿ ಉತ್ತರಿಸಿ :–** **2×3=6**

18) ಆನೆಯು ಎಲ್ಲಾ ಪ್ರಾಣಿಗಳಿಂದಲೂ ಮೆಚ್ಚುಗೆಯನ್ನು ಗಳಿಸಲು ಕಾರಣವೇನು?.

19) ಜಲದೇವತೆ, 'ನನಗಾಗಿ ನೀವೇನು ಮಾಡಬಲ್ಲಿರಿ?' ಎಂದು ನಿಮ್ಮ ಬಳಿ ಕೇಳಿದರೆ ನಿಮ್ಮ ಉತ್ತರವೇನು?

**1. ಘಟಕಾವಾರು ಅಂಕ ಹಂಚಿಕೆ** **5th 1st sem ಕನ್ನಡ** **2. ಉದ್ದೇಶವಾರು ಅಂಕ ಹಂಚಿಕೆ**

| ಕ್ರ. ಸಂ | ಘಟಕ | ಒಟ್ಟು ಪ್ರಶ್ನೆ | ಒಟ್ಟು ಅಂಕ | ಶೇಕಡಾ |
|---|---|---|---|---|
| 1 | ಒಟ್ಟಿಗೆ ಬಾಳುವ ಆನಂದ | 2 | 3 | 10% |
| 2 | ನದಿಯ ಅಳಲು | 4 | 7 | 23% |
| 3 | ನಮ್ಮ ಮಾತೂ ಕೇಳಿ | 2 | 4 | 13% |
| 4 | ಜೀವದ ಮೌಲ್ಯ | 1 | 2 | 7% |
| 5 | ಗಿಡಮರ | 2 | 4 | 13% |
| 6 | ಸ್ವಾತಂತ್ರ್ಯದ ಹಣತೆ | 2 | 3 | 10% |
| 7 | ವಚನಗಳು | 1 | 2 | 7% |
| 8 | ಕನ್ನಡ ಕನ್ನಡ ಬರ್ರಿ ನಮ್ಮ ಸಂಗಡ | 1 | 1 | 4% |
| 9 | ವ್ಯಾಕರಣ | 4 | 4 | 13% |
| 10 | | | | |
| 11 | | | | |
| 12 | | | | |
| | | | | |
| | | | | |
| | ಒಟ್ಟು | 19 | 30 | 100% |

| ಕ್ರ. ಸಂ | ಉದ್ದೇಶಗಳು | ಒಟ್ಟು ಪ್ರಶ್ನೆ | ಒಟ್ಟು ಅಂಕ | ಶೇಕಡಾ |
|---|---|---|---|---|
| 1 | ಜ್ಞಾನ | 7 | 8 | 27% |
| 2 | ತಿಳಿವಳಿಕೆ | 9 | 14 | 47% |
| 3 | ಅಭಿವ್ಯಕ್ತಿ /ಅನ್ವಯ | 2 | 5 | 16% |
| 4 | ಪ್ರಶಂಸೆ / ಕೌಶಲ | 1 | 3 | 10% |
| | ಒಟ್ಟು | 19 | 30 | 100% |

**3. ಪ್ರಶ್ನಾವಾರು ಅಂಕ ಹಂಚಿಕೆ**

| ಕ್ರ. ಸಂ | ಪ್ರಶ್ನೆಯ ವಿಧ | ಒಟ್ಟು ಪ್ರಶ್ನೆ | ಒಟ್ಟು ಅಂಕ | ಶೇಕಡಾ |
|---|---|---|---|---|
| 1 | ವಸ್ತುನಿಷ್ಠ ಪ್ರಶ್ನೆ | 7 | 10 | 34% |
| 2 | ಕಿರು ಉತ್ತರ ಪ್ರಶ್ನೆ | 10 | 14 | 46% |
| 3 | ದೀರ್ಘ ಉ. ಪ್ರಶ್ನೆ | 2 | 6 | 20% |
| | ಒಟ್ಟು | 19 | 30 | 100% |

**4. ಕಠಿಣತಾವಾರು ಅಂಕ ಹಂಚಿಕೆ**

| ಕ್ರ. ಸಂ | ಪ್ರಶ್ನೆಯ ವಿಧ | ಒಟ್ಟು ಪ್ರಶ್ನೆ | ಒಟ್ಟು ಅಂಕ | ಶೇಕಡಾ |
|---|---|---|---|---|
| 1 | ಸರಳ | 10 | 10 | 34% |
| 2 | ಸಾಧಾರಣ | 7 | 14 | 46% |
| 3 | ಕಠಿಣ | 2 | 6 | 20% |
| | ಒಟ್ಟು | 19 | 30 | 100% |

# ನೀಲನಕಾಶೆ

| ಕ್ರ. ಸಂ | ಉದ್ದೇಶಗಳು ಘಟಕಗಳು | ಜ್ಞಾನ | | | ತಿಳಿವಳಿಕೆ | | | ಅಭಿವ್ಯಕ್ತಿ/ಅನ್ವಯ | | | ಪ್ರಶಂಸೆ/ಕೌಶಲ | | | ಒಟ್ಟು | |
|---|---|---|---|---|---|---|---|---|---|---|---|---|---|---|---|
| | | ವ. | ಕಿ. | ದೀ. | ವ. | ಕಿ. | ದೀ. | ವ. | ಕಿ. | ದೀ. | ವ. | ಕಿ. | ದೀ. | ಪ್ರಶ್ನೆ | ಅಂಕ |
| 1 | ಒಟ್ಟಿಗೆ ಬಾಳುವ ಆನಂದ | 1(1) | 1(2) | | | | | | | | | | | 2 | 3 |
| 2 | ನದಿಯ ಅಳಲು | 2(1) | | | | 1(2) | | | | 1(3) | | | | 4 | 7 |
| 3 | ನಮ್ಮ ಮಾತೂ ಕೇಳಿ | 1(1) | | | | | | | | | | | 1(3) | 2 | 4 |
| 4 | ಜೀವದ ಮೌಲ್ಯ | | | | | 1(2) | | | | | | | | 1 | 2 |
| 5 | ಗಿಡಮರ | | | | | 2(2) | | | | | | | | 2 | 4 |
| 6 | ಸ್ವಾತಂತ್ರ್ಯದ ಹಣತೆ | 1(1) | | | | 1(2) | | | | | | | | 2 | 3 |
| 7 | ವಚನಗಳು | | | | | | | | 1(2) | | | | | 1 | 2 |
| 8 | ಕನ್ನಡ ಕನ್ನಡ ಬರ್ರಿ ನಮ್ಮ ಸಂಗಡ | 1(1) | | | | | | | | | | | | 1 | 1 |
| 9 | ವ್ಯಾಕರಣ | | | | 4(1) | | | | | | | | | 4 | 4 |
| 10 | | | | | | | | | | | | | | | |
| 11 | | | | | | | | | | | | | | | |
| 12 | | | | | | | | | | | | | | | |
| | | | | | | | | | | | | | | | |
| | | 6(6) | 1(2) | | 4(4) | 5(10) | | | 1(2) | 1(3) | | | 1(3) | 19 | |
| | ಒಟ್ಟು | 7(8) | | | 9(14) | | | 2(5) | | | 1(3) | | | | 30 |

**ಸೂಚನೆ :–** 1.ವ= ವಸ್ತುನಿಷ್ಠ ಪ್ರಶ್ನೆ, ಕಿ= ಕಿರುಉತ್ತರ ಪ್ರಶ್ನೆ, ದೀ= ದೀರ್ಘ ಉತ್ತರ ಪ್ರಶ್ನೆ 2.ಪ್ರಶ್ನೆ(ಅಂಕ)

**ತರಗತಿ:5** **ಪ್ರಶ್ನಾವಾರು ವಿಶ್ಲೇಷಣೆ** **ವಿಷಯ :ಕನ್ನಡ**

| ಪ್ರಶ್ನೆ ಸಂ. | ಘಟಕ | ಉದ್ದಿಷ್ಟ | ನಿರ್ದಿಷ್ಟ | ಅಂಕ | ಪ್ರಶ್ನೆಯ ರೂಪ | ಕ್ಲಿಷ್ಟತೆ | ಸಮಯ |
|---|---|---|---|---|---|---|---|
| 1 | ನದಿಯ ಅಳಲು | ಜ್ಞಾನ | ಸ್ಮರಿಸುತ್ತಾನೆ | 1 | ಕಿರುಉತ್ತರ | ಸುಲಭ | 2 |
| 2 | ಒಟ್ಟಿಗೆ ಬಾಳುವ ಆನಂದ | ಜ್ಞಾನ | ಸ್ಮರಿಸುತ್ತಾನೆ | 1 | ಕಿರುಉತ್ತರ | ಸುಲಭ | 2 |
| 3 | ಕನ್ನಡ ಕನ್ನಡ ಬರ್‍ರಿ ನಮ್ಮ ಸಂಗಡ | ಜ್ಞಾನ | ಸ್ಮರಿಸುತ್ತಾನೆ | 1 | ಕಿರುಉತ್ತರ | ಸುಲಭ | 2 |
| 4 | ನಮ್ಮ ಮಾತೂ ಕೇಳಿ | ಜ್ಞಾನ | ಸ್ಮರಿಸುತ್ತಾನೆ | 1 | ವಸ್ತುನಿಷ್ಠ | ಸುಲಭ | 2 |
| 5 | ನದಿಯ ಅಳಲು | ಜ್ಞಾನ | ಸ್ಮರಿಸುತ್ತಾನೆ | 1 | ವಸ್ತುನಿಷ್ಠ | ಸುಲಭ | 2 |
| 6 | ಸ್ವಾತಂತ್ರ್ಯದ ಹಣತೆ | ಜ್ಞಾನ | ಸ್ಮರಿಸುತ್ತಾನೆ | 1 | ವಸ್ತುನಿಷ್ಠ | ಸುಲಭ | 2 |
| 7 | ವ್ಯಾಕರಣ | ಗ್ರಹಿಕೆ | ಗ್ರಹಿಸುವನು | 1 | ವಸ್ತುನಿಷ್ಠ | ಸುಲಭ | 2 |
| 8 | ವ್ಯಾಕರಣ | ಗ್ರಹಿಕೆ | ಗ್ರಹಿಸುವನು | 1 | ವಸ್ತುನಿಷ್ಠ | ಸುಲಭ | 2 |
| 9 | ವ್ಯಾಕರಣ | ಗ್ರಹಿಕೆ | ಗ್ರಹಿಸುವನು | 1 | ವಸ್ತುನಿಷ್ಠ | ಸುಲಭ | 2 |
| 10 | ವ್ಯಾಕರಣ | ಗ್ರಹಿಕೆ | ಗ್ರಹಿಸುವನು | 1 | ವಸ್ತುನಿಷ್ಠ | ಸುಲಭ | 2 |
| 11 | ಗಿಡ ಮರ | ಗ್ರಹಿಕೆ | ಗ್ರಹಿಸುವನು | 2 | ಕಿರುಉತ್ತರ | ಸಾಧಾರಣ | 8 |
| 12 | ಒಟ್ಟಿಗೆ ಬಾಳುವ ಆನಂದ | ಜ್ಞಾನ | ಸ್ಮರಿಸುತ್ತಾನೆ | 2 | ಕಿರುಉತ್ತರ | ಸಾಧಾರಣ | 8 |
| 13 | ಜೀವದ ಮೌಲ್ಯ | ಗ್ರಹಿಕೆ | ಗ್ರಹಿಸುವನು | 2 | ಕಿರುಉತ್ತರ | ಸಾಧಾರಣ | 8 |
| 14 | ಗಿಡ ಮರ | ಗ್ರಹಿಕೆ | ಗ್ರಹಿಸುವನು | 2 | ಕಿರುಉತ್ತರ | ಸಾಧಾರಣ | 8 |
| 15 | ನದಿಯ ಅಳಲು | ಗ್ರಹಿಕೆ | ಗ್ರಹಿಸುವನು | 2 | ಕಿರುಉತ್ತರ | ಸಾಧಾರಣ | 8 |
| 16 | ವಚನಗಳು | ಅಭಿವ್ಯಕ್ತಿ | ಬರೆಯುವುದು | 2 | ಕಿರುಉತ್ತರ | ಸಾಧಾರಣ | 8 |
| 17 | ಸ್ವಾತಂತ್ರ್ಯದ ಹಣತೆ | ಗ್ರಹಿಕೆ | ಗ್ರಹಿಸುವನು | 2 | ಕಿರುಉತ್ತರ | ಸಾಧಾರಣ | 8 |
| 18 | ನಮ್ಮ ಮಾತೂ ಕೇಳಿ | ಪ್ರಶಂಸೆ | ಮೆಚ್ಚುವನು | 3 | ದೀರ್ಘಉತ್ತರ | ಕಠಿಣ | 7 |
| 19 | ನದಿಯ ಅಳಲು | ಅಭಿವ್ಯಕ್ತಿ | ಬರೆಯುವುದು | 3 | ದೀರ್ಘಉತ್ತರ | ಕಠಿಣ | 7 |

# 5ನೇ ತರಗತಿ ಕನ್ನಡ ಮಾದರಿ ಉತ್ತರ ಪತ್ರಿಕೆ ಸೆಪ್ಟಂಬರ್–2023

1. ಭರತ ಮತ್ತು ಶಂಕರನಿಗೆ ನದಿಯ ಮಾಲಿನ್ಯದ ಸೋಂಕು ತಗುಲಿತು.
2. ಗುಂಡನೆಯ ಕಲ್ಲು ಮರದ ಕೆಳಗೆ ಇತ್ತು .
3. ನೇಸರನು ಭೂಮಿ ತುಂಬಾ ಬೆಳಕನ್ನು ಬಿತ್ತಬೇಕು.
4. ಕರಡಿ
5. ಜಲದೇವತೆ
6. ಕೆ ಎಸ್ ನಿಸಾರ್ ಅಹಮ್ಮದ್
7. ಅಂಕಿತನಾಮ
8. ನಾಯಕರು
9. ಶರಣೆ
10. ಮರ+ಅನ್ನು
11. ಬೊಡ್ಡೆ ಕರಿದು ಎಲೆ ಹಸಿರು

    ಹೂವು ನಾನಾ ತರತರ
    ಎಂಥ ಸೊಗಸು ಏನು ಕಂಪು
    ಬೆಳೆದು ನಿಂತ ಗಿಡ ಮರ.

12. ನಾನು ಬೇವಿನ ಮರ ನಾನು ಅಮ್ಮನ ಮರ ನೀನು ನನ್ನ ಕೆಳಗಿರುವುದರಿಂದ ನಿನ್ನನ್ನು ಅಮ್ಮನಕಲ್ಲು ಎಂದು ಜನ ಕರೆಯುತ್ತಾರೆ ಎಂದು ಹೇಳಿತು.
13. ಡಾ. ಮಿಲ್ಲರ್ ಮಕ್ಕಳನ್ನು ಭೂಮಿಗಿಳಿಸಿದ ವೈದ್ಯರ ಹೆಸರನ್ನು ಆ ಮಕ್ಕಳ ಅಡ್ಡ ಹೆಸರಾಗಿ ಬಳಸುವುದು ನಮ್ಮೂರಿನ ಸಂಪ್ರದಾಯ. ಹಾಗೆಯೇ ನನ್ನನ್ನು ಭೂಮಿಗಿಳಿಸಿದ ಒಬ್ಬ ತರುಣ ವೈದ್ಯಕೀಯ ವಿದ್ಯಾರ್ಥಿಯ ಹೆಸರನ್ನೇ ನನಗೆ ಇಡಲಾಯಿತು" ಎಂದು ಹೇಳಿದ್ದನ್ನು ಕೇಳಿ ಮಾರ್ಲಿನನ ಕಂಠ ಬಿಗಿದು ಬಂದಿತು.
14. ಬೆಳೆದು ನಿಂತ ಗಿಡಮರ ಕಪ್ಪು ಬಣ್ಣದ ಬೊಡ್ಡೆಗಳು ಹಚ್ಚಹಸಿರು ಎಲೆಗಳು, ನಾನಾ ಬಣ್ಣ ಬಣ್ಣದಿಂದ ಕೂಡಿದ ಹೂಗಳು, ಹೂಗಳಿಂದ ಅಲಂಕೃತವಾಗಿ ಗಿಡ ಮರಗಳು ಬೆಳೆದು ನಿಂತಿವೆ.
15. ಭಾನುವಾರ ಶಾಲೆಗೆ ರಜವಿದ್ದುದರಿಂದ ಆಟವಾಡಲು ಹೋಗಿದ್ದರು . ಮಧ್ಯಾಹ್ನದವರೆಗೂ ಆಟವಾಡಿ ನಂತರ ಸೆಕೆಯನ್ನು ತಾಳಲಾರದೆ ನದಿಯಲ್ಲಿ ಸ್ನಾನಮಾಡಿದರು .
16. ಲೋಕದಲ್ಲಿ ಸುತ್ತಿನಿಂದೆಗಳು ಬಂದಾಗ ಮನಸ್ಸಿನಲ್ಲಿ ಕೋಪ ಮಾಡಿಕೊಳ್ಳದೆ ಸಮಾಧಾನಿಯಾಗಿರಬೇಕು.
17. ಪ್ರತಿಯೊಬ್ಬ ವ್ಯಕ್ತಿಯ ಪರಿಶ್ರಮದ ಬೆವರು ಹನಿಗಳ ಸಿಂಚನದಿಂದ ಮೊಳಕೆ ಅಂಕುರಿಸಿ ಅದು ನಂತರ ಅದು ಮರವಾಗಿ ಬಳೆದಿದೆ.
18. ಆನೆಯು ಕಾಡಿನ ಅಧಿಪತಿಯಾಗಿತ್ತು. ಅದು ಆಗಾಗ ಸಭೆ ಕರೆದು ಅವುಗಳ ಕ್ಷೇಮ ಸಮಾಚಾರವನ್ನು ವಿಚಾರಿಸುತ್ತಿತ್ತು. ಊರಿನಲ್ಲಿರುವ ಪ್ರಾಣಿಗಳೊಂದಿಗೂ ಸ್ನೇಹವನ್ನು ಬೆಳೆಸಿತ್ತು. ಅವುಗಳಿಗೂ ಸಭೆಯಲ್ಲಿ ಪಾಲ್ಗೊಳ್ಳಲು ಅವಕಾಶ ನೀಡುತ್ತಿತ್ತು. ಉತ್ತಮ ನಾಯಕತ್ವ ಗುಣ ಹೊಂದಿರುವ ಆನೆಯು ಎಲ್ಲಾ ಪ್ರಾಣಿಗಳಿಂದಲೂ ಮೆಚ್ಚುಗೆಯನ್ನು ಗಳಿಸಿತ್ತು.
19. ನದಿಗೆ ಮಲಿನ ವಸ್ತುಗಳನ್ನು ಎಸೆಯುವುದರಿಂದ ನೀರು ಕೊಳಕಾಗುತ್ತದೆ.ಆ ನೀರನ್ನು ಕುಡಿಯುವುದರಿಂದ ಅನೇಕ ರೋಗಗಳು ಬರುತ್ತವೆ.ಅಲ್ಲದೇ ನೀರಿನಲ್ಲಿರುವ ಜೀವಸಂಕುಲ ನಾಶವಾಗುತ್ತದೆ. ಆದ್ದರಿಂದ ನೀರಿಗೆ ಯಾವುದೇ ಅಪಾಯಕಾರಿ ತ್ಯಾಜ್ಯ ವಸ್ತುಗಳನ್ನು ನದಿಗೆ ಎಸೆಯಬೇಡಿ ಎಂದು ಜನರಿಗೆ ತಿಳುವಳಿಕೆ ನೀಡುತ್ತೇವೆ.